PW1
PA Holder



ಅಸಲ ದಾವಾ ನಂ.221/2016

**ಮೆ:: ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ**

1] ಅಮರ ತಂದೆ ರಾಮಪ್ಪ ಮಾವಿನಗಿಡದ

......ವಾದಿ

// ವಿರುದ್ಧ //

1] ರಾಮಪ್ಪ ತಂದೆ ಭೀಮಪ್ಪ ಮಾವಿನಗಿಡದ
ಹಾಗೂ ಇತರರು

........ಪ್ರತಿವಾದಿಯರು

***ಪಿ.ಡಬ್ಲ್ಯೂ-2 ಇವರ ಹೆಚ್ಚಿನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ ಮೂಲಕ***

NOTARY
R.S. [illegible]
Gokak Rev. Taluka
District:Belagavi
Regd. No.Law/
LCL-213/2025
Exp.16-11-2030
GOVT. OF KARNATAKA

| | |
|---|---|
| ಹೆಸರು | : ಹಣಮಂತ ಮಾವಿನಗಿಡದ |
| ತಂದೆಯ ಹೆಸರು | : ಸತ್ತೆಪ್ಪ ಮಾವಿನಗಿಡದ |
| ವಯಸ್ಸು | : 42 ವರ್ಷ |
| ಉದ್ಯೋಗ | : ಒಕ್ಕಲುತನ |
| ಸಾಕೀನ | : ಕಳ್ಳಿಗುದ್ದಿ, ತಾ: ಗೋಕಾಕ |

ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡಿದ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1) ನಾನು ಈ ಪ್ರಕರಣದಲ್ಲಿ ವಾದಿಯ ಒಟ್ಟು ಮುಖ್ತಿಯಾರ ಇರುತ್ತೇನೆ. ನಾನು ಈಗಾಗಲೆ ಮುಖ್ತಿಯಾರ ಪತ್ರವನ್ನು ಮಾನ್ಯ ಕೋರ್ಟಿನಲ್ಲಿ ಹಾಜರ ಪಡಿಸಿರುತ್ತೇನೆ. ಈಗಾಗಲೆ ವಾದಿ-ಅಮರ ಇತನು ತನ್ನ ಸಾಕ್ಷಿ ಪ್ರಮಾಣ ಪತ್ರ

No. of CORRECTIONS

ಹಾಗೂ ಪಾಟಿ ಸವಾಲು ಮುಗಿದ ನಂತರ ನೌಕರಿ ಸಲುವಾಗಿ ಹೊರ ದೇಶಕ್ಕೆ ಹೋಗಿದ್ದರಿಂದ ಆತನ ಪರವಾಗಿ ಪ್ರಕರಣ ನಡೆಸಲು ನನಗೆ ಮುಖ್ತಿಯಾರ ಪತ್ರ ಬರೆದುಕೊಟ್ಟಿದ್ದು, ಈಗ ಆತನ ಪರವಾಗಿ ನಾನು ನನ್ನ ಹೆಚ್ಚಿನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಈಗಾಗಲೆ ಆತನು ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರವನ್ನು ಈ ಹೆಚ್ಚಿನ ಸಾಕ್ಷಿ ಪ್ರಮಾಣ ಪತ್ರದ ಒಂದು ಭಾಗ ಅಂತಾ ತಿಳಿಯಬೇಕಾಗಿ ವಿನಂತಿ.

2) ಈಗಾಗಲೆ ನಾನು ವಾದಿಯ ಪರ ಸಾಕ್ಷಿದಾರ ಅಂತಾ ಪಿ.ಡಬ್ಲ್ಯೂ.2 ಅಂತಾ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ವಾದಿ-ಅಮರ ಇತನು ನನ್ನ ಸಹೋದರನಾಗಬೇಕು.

3) ಈ ಪ್ರಕರಣದಲ್ಲಿ ವಾದಿಯು ಮೂಲ ದಾವೆದಲ್ಲಿ ತನ್ನ ಸಾಕ್ಷಿ ಪ್ರಮಾಣ ಪತ್ರ ಆದ ನಂತರ ವಾದ ಪತ್ರದಲ್ಲಿ ತಿದ್ದುಪಡೆ ಮಾಡಿಕೊಂಡಿದ್ದರಿಂದ ಹೆಚ್ಚಿನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ. ಈಗಾಗಲೆ ರಾಮಪ್ಪ ಹಾಗೂ ಆತನ ಸಹೋದರರಲ್ಲಿ ಹಿರಿಯರ ಆಸ್ತಿಗಳಲ್ಲಿ ಪಾಲು ವಿಂಗಡನೆ ಆಗಿ ದಾವೆದ ಆಸ್ತಿ ಅ.ನಂ.1 & 2 ಆತನ ಪಾಲಿಗೆ ಬಂದಿರುತ್ತದೆ. ಪ್ರತಿವಾದಿ ನಂ.1 ರಾಮಪ್ಪ ಇತನು ಪ್ರೌಢ ಶಾಲಾ ಶಿಕ್ಷಕ ಅಂತಾ ಸರಕಾರಿ ಶಾಲೆಯಲ್ಲಿ ಸುಮಾರು 30 ವರ್ಷ ಮೇಲ್ಪಟ್ಟು ನೌಕರಿ ಮಾಡಿ ನಿವೃತ್ತಿ ಹೊಂದಿದ್ದು ಆತನಿಗೆ ಒಳ್ಳೆಯ ಸಂಬಳ ಇದ್ದು ಆತನು ನಿವೃತ್ತಿ ಹೊಂದಿದ ನಂತರ ಸಾಕಷ್ಟು ನಿವೃತ್ತಿ ಆದಾಯ ಬಂದಿರುತ್ತದೆ. ಪ್ರತಿವಾದಿ ನಂ.1 ರಾಮಪ್ಪ ಇತನು ತನ್ನ ಸ್ವತಃ ನೌಕರಿಯಿಂದ ಬಂದ ಆದಾಯದಿಂದ ಗೋಕಾಕದಲ್ಲಿ ಪ್ಲಾಟನ್ನು ಖರೀದಿಸಿ ಮನೆಯನ್ನು ಕಟ್ಟಿಕೊಂಡಿದ್ದು ಇರುತ್ತದೆ. ಸದರಿ ಮನೆ ವ ಖುಲ್ಲಾ ಜಾಗೆ ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸ್ವಯಾರ್ಜಿತ ಆಸ್ತಿಯು ಆತನ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ.

No. of CORRECTIONS

4) ರಾಮಪ್ಪ ಇತನು ತನ್ನ ಸ್ವಂತ ಆದಾಯದಿಂದ ತನ್ನ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸಿದ್ದಾನೆ, ಅದು ಅಲ್ಲದೆ ಅವನ ಮಕ್ಕಳು ಬುದ್ದಿವಂತರಾಗಿದ್ದು ಮೇರಿಟ ಮೇಲೆ ಸರಕಾರದಿಂದ ಸ್ಕಾಲರಶೀಪ ಪಡೆದುಕೊಂಡು ತಮ್ಮ ಶಿಕ್ಷಣ ಪಡೆದಿರುತ್ತಾರೆ. ರಾಮಪ್ಪ ಇತನು ತನ್ನ ಮಕ್ಕಳ ಶಿಕ್ಷಣಕ್ಕಾಗಿ ಆಸ್ತಿ ಖರೀದಿ ಮಾಲಕ್ಕೆ ಯಾರಿಂದಲೂ ಸಾಲ ವಗ್ಯೆರೆ ಪಡೆಯುವ ಪ್ರಸಂಗ ಬಂದಿರುವುದಿಲ್ಲ.

5) ದಾವೆದ ಆಸ್ತಿ ಅ.ನಂ.1 & 2 ಇವು ಒಳ್ಳೆಯ ಫಲವತ್ತಾದ ನೀರಾವರಿ ಸೌಲಭ್ಯ ಹೊಂದಿದ ಜಮೀನು ಇರುತ್ತವೆ. ಅವುಗಳಿಂದ ಒಳ್ಳೆಯ ಉತ್ಪನ್ನ ಬರುತ್ತಿದ್ದು ಹೀಗಾಗಿ ರಾಮಪ್ಪ ಇತನಿಗೆ ಮನೆತನ ಅಡಚಣೆ ಇರಲಿಲ್ಲ, ದಾವೆದ ಆಸ್ತಿಗಳನ್ನು ಪ್ರತಿವಾದಿಯರಿಗೆ ಮಾರಾಟ ಮಾಡುವ ಪ್ರಶ್ನೆಯೇ ಬಂದಿರುವುದಿಲ್ಲ. ದಾವೆದ ಆಸ್ತಿಗಳು ಈ ಹೊತ್ತಿಗೂ ವಾದಿಯ ಸಮಾಯಕ ಕಬ್ಜಾ ವಹಿವಾಟಿಯಲ್ಲಿದ್ದು ಆತನು ಹೊರ ದೇಶದಿಂದ ಮೇಲಿಂದ ಮೇಲೆ ಬಂದು ನನಗೆ ಜಮೀನುಗಳನ್ನು ಉಸ್ತುವಾರಿ ಮಾಡಲು ಹೇಳಿ ಅಧಿಕಾರ ಪತ್ರ ಕೊಟ್ಟಿರುತ್ತಾನೆ. ರಾಮಪ್ಪನಿಗೆ ಇಬ್ಬರು ಗಂಡು ಮಕ್ಕಳು ಇದ್ದು ಅವರು ಒಳ್ಳೆಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಸಾಕಷ್ಟು ಸಂಬಳ ಇರುತ್ತದೆ. ಹೀಗಾಗಿ ರಾಮಪ್ಪ ಇತನಿಗೆ ದಾವೆದ ಆಸ್ತಿಗಳನ್ನು ಮಾರಾಟ ಮಾಡುವ ಪ್ರಶ್ನೆಯ ಇರುವುದಿಲ್ಲ, ದಾವೆದ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ಮಕ್ಕಳ ಒಪ್ಪಿಗೆ ವ ಅನುಮತಿ ಪಡೆದಿರುವುದಿಲ್ಲ. ಅದೇ ರೀತಿ ಪ್ರತಿವಾದಿ ನಂ.4 & 5 ಇವರು ಖರೀದಿ ಜಮೀನುಗಳಲ್ಲಿ ಕಬ್ಜೆಗೆ ಬಂದಿರುವುದಿಲ್ಲ. ಸದರಿ ಖರೀದಿಯು ಖೊಟ್ಟಿ ಇದ್ದು ಅದು ವಾದಿಯ ಮೇಲೆ ಬಂಧನಕಾರಕ ಆಗುವುದಿಲ್ಲ.

ಈ ಎಲ್ಲಾ ಕಾರಣಗಳಿಂದ ವಾದಿಯು ಮಾಡಿದ ದಾವೆಯನ್ನು ಡಿಕ್ರಿ ಮಾಡಿ ಹಿರಿಯರ ಆಸ್ತಿಗಳಲ್ಲಿ ಆತನಿಗೆ ಪಾಲು ಕೊಡಬೇಕಾಗಿ ವಿನಂತಿ ಮತ್ತು ಪ್ರತಿವಾದಿ ನಂ.1 ರಾಮಪ್ಪ ಇತನು ಪ್ರತಿವಾದಿ ನಂ.4 & 5 ಇವರ ಹೆಸರಿನಿಂದ

No. of CORRECTIONS

ಸೃಷ್ಟಿಸಿದ ಖರೀದಿ ಎಂಬ ಕಾಗದವು ವಾದಿಯ ಮೇಲೆ ಬಂಧನಕಾರಕ ಆಗುವುದಿಲ್ಲ ಅಂತಾ ಆದೇಶ ಮಾಡಬೇಕು ಅಂತಾ ಕೊಟ್ಟ ಪುರವಣಿ ಜವಾಬ.

ಸ್ಥಳ: ಗೋಕಾಕ,
ದಿನಾಂಕ: 14/07/2026

ಶಪಥವಿಧಿಗಾರ

ಈ ಮೇಲೆ ಬರೆದ ಯಾವತ್ತೂ ಮಜಕೂರುಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಯಿಸಿದ್ದು ಅವು ಸಂಪೂರ್ಣ ನಿಜವಿರುತ್ತವೆ.

ಸ್ಥಳ: ಗೋಕಾಕ,
ದಿನಾಂಕ: 14/07/2026

ಶಪಥವಿಧಿಗಾರ

// ಸದರಿಯವರ ಪರಿಚಯವಿದೆ//

(ಬಿ.ಕೆ. ಜೋಶಿ)
ವಕೀಲರು – ಗೋಕಾಕ

NOTARY
R.S. Beerannavar
Gokak Rev. Taluka
District:Belagavi
Regd. No.Law/
LCL-213/2026
Exp.16-11-2030
GOVT. OF KARNATAKA

Sworn to before me

R. S. BEERANNAVAR
B.Com., LL.B. (Spl.)
ADVOCATE & NOTARY, GOKAK

14 JUL 2026

No. of CORRECTIONS